200 (25) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ನಡೆದ ರೈತರ ಆತ್ಮಹತ್ಯೆಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು) ,

ಆ) ರಾಜ್ಯದ ಹಾಗೂ ರಾಷ್ಟ್ರದ ಬೆನ್ನೆಲುಬಾಗಿರುವ ರೈತರ ಆತ್ಮಹತ್ಯೆಯಂತಹ ಹೀನಾಯ ಸ್ಥಿತಿ ತಡೆಗಟ್ಟಲು ಸರ್ಕಾರ ಕೈಗೊಂಡ ತುರ್ತು ಕ್ರಮಗಳಾವುವು,

ಇ) ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಇರುವ ಕಾರಣಗಳೇನು, ಇಂತಹ ಕಾರಣಗಳನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು,

ಈ) ರೈತರ ಆತ್ಮಹತ್ಯೆ ತಡೆಗಟ್ಟಲು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಶೇಷ ಪಡೆಗಳನ್ನು ರಚಿಸಲಾಗಿದೆಯೇ, ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಬಂಡೆಪ್ಪ ಕಾಶಂಪುರ

ರಾಜ್ಯದಲ್ಲಿ 2006-07 ಸಾಲಿನಲ್ಲಿ 320 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು ಇದರ ಜಿಲ್ಲಾವಾರು ವಿವರಗಳನ್ನು ಅನುಭಂದ-1 ರಲ್ಲಿ ನೀಡಲಾಗಿದೆ

ಅ) ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳು ಇಂತಿವೆ

ಆ) ಶೇ 1ರ ಬಡ್ಡಿ ದರದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಸಾಲ ನೀಡುವುದು

ಆ)ಶೇ 75ರ ರಿಯಾಯಿತಿ ದರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜ ವಿತರಿಸುವುದು

ಇ) ಬೆಂಬಲ ಬೆಲೆಗಿಂತ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ದರವು ಕುಸಿದಲ್ಲಿ ಮಾರುಕಟ್ಟೆ ಮಧ್ಯಪ್ರವೇಶದಮೂಲಕ ರೈತರ ಕೃಷಿ ಉತ್ಪನ್ನಗಳ ಖರೀದಿ

ಈ) ಟ್ರಾಕ್ಟರ್, ಪವರ್ ಟಿಲ್ಲರ್ ಗಳಿಗೆ ಶೇ 50ರ ರಿಯಾಯಿತಿ ದರದಲ್ಲಿ ವಿತರಣೆ

ಉ) ಎತ್ತು ಮತ್ತು ಬಂಡಿಯನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ 50ರ ರಿಯಾಯಿತಿಯಲ್ಲಿ ವಿತರಣೆ

ಊ) ಕೃಷಿ ತಾಂತ್ರಿಕತೆಯ ಬಗ್ಗೆ ರೈತರಿಗೆ ತರಬೇತಿ

ಎ) ರಿಯಾಯಿತಿಯಲ್ಲಿ ಹನ ನೀರಾವರಿ ಮತ್ತು ತುಂತುರು ನೀರಾವರಿ ಉಪಕರಣಗಳ ವಿತರಣೆ

ಏ) ಸಾಗುವಳಿ ವೆಚ್ಚ ಕಡಿಮೆ ಮಾಡಲು ಸಾವಯವ ಕೃಷಿ ಮತ್ತು ಜೀವಾಣು ಗೊಬ್ಬರ ಪ್ರೊತ್ಸಾಹ

ಐ) ಮಣ್ಣು ಪರೀಕ್ಷೆಯ ಆಧಾರದ ಮೇಲೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮ

ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿರುವಂತಹ 6 ಜಿಲ್ಲೆಗಳಾದ ಶಿವಮೊಗ್ಗ, ಚಿತ್ರದುರ್ಗ, ಬೆಳಗಾಂ, ಹಾಸನ,ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಭಾರತ ಸರ್ಕಾರದ ವಿಶೇಷ ಪ್ಯಾಕೇಜ್

ಇ) ಕೃಷಿ ಸಾಲ ಸಾಮಾಜಿಕ ಸಂಸ್ಥೆಗಳ ವಿಫಲತೆ, ಸಡಿಲಗೊಳ್ಳುತ್ತಿರುವ ಸಾಮಾಜಿಕ ಭದ್ರತೆ, ದುಶ್ಚಟಗಳು ಮಕ್ಕಳ ಮದುವೆಗೆ ಸಾಲ, ಅನಾರೋಗ್ಯ, ಬಗೆಹರಿಸದ ಕುಟುಂಬ

ಸಮಸ್ಯೆಗಳು, ಇತ್ಯಾದಿಗಳು ರೈತರ ಆತ್ಮಹತ್ಯೆಗೆ ಕಾರಣಗಳಿರ ಬಹುದೆಂದು ಅಂದಾಜಿಸಲಾಗಿದೆ ಇದನ್ನು ತಡೆಗಟ್ಟಲು ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ

ಈ) ಇಲ್ಲ

ವಿಧಾನ ಸಭೆ ಪ್ರಶ್ನೆ ಸಂ 25 ಕ್ಕೆ

ಅನುಬಂಧ–1

ಜಿಲ್ಲಾವಾರು ಆತ್ಮಹತ್ಯೆ ಪ್ರಕರಣಗಳು – 2006–07

ಕ್ರಸಂ	ಜಿಲ್ಲೆಗಳು	ವರದಿಯಾದ ಪ್ರಕರಣಗಳು
1	ಬಾಗಲಕೋಟೆ	7
2	ಬೆಂಗಳೂರು ಗ್ರಾಮಾಂತರ	6
3	ಬೆಂಗಳೂರು ನಗರ	0
4	ಬೀದರ್	30
5	ಹಾಸನ	19
6	ಚಾಮರಾಜನಗರ	1
7	ಹಾವೇರಿ	11
8	ಉತ್ತರ ಕನ್ನಡ	3

9	ಧಾರವಾಡ	4
10	ಕೊಪ್ಪಳ	16
11	ಮಂಡ್ಯ	8
12	ಚಿಕ್ಕಮಗಳೂರು	27
13	ರಾಯಚೂರು	2
14	ತುಮಕೂರು	22
15	ಶಿವಮೊಗ್ಗ	30
16	ಕೋಲಾರ	3
17	ಮೈಸೂರು	4
18	ಉಡುಪಿ	0
19	ಕೊಡಗು	13
20	ಬೆಳಗಾಂ	24
21	ದಾವಣಗೆರೆ	15
22	ಬಳ್ಳಾರಿ	10
23	ಚಿತ್ರದುರ್ಗ	19
24	ಗುಲ್ಬರ್ಗ	10
25	ಬಿಜಾಪುರ	17
26	ದಕ್ಷಿಣ ಕನ್ನಡ	4
27	ಗದಗ್	15
	ಒಟ್ಟು	**320**